ಜಿಲ್ಲಾ ಹಾಗೂ ದೊಡ್ಡ ಆಸ್ಪತ್ರೆಗಳಿಗೆ ಕೆ.ಎ.ಎಸ್. ಅಧಿಕಾರಿಗಳ ನೇಮಕ

4636 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಹಾಗೂ ದೊಡ್ಡ ಆಸ್ಪತ್ರೆಗಳಿಗೆ ಆಡಳಿತಾಧಿಕಾರಿಯನ್ನಾಗಿ ಕೆ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಈ ರೀತಿಯ ನೇಮಕಗಳಿಂದಾಗುವ ಸಾಧಕ ಭಾದಕಗಳೇನು?

ಇ) ಈ ರೀತಿಯ ನೇಮಕಕ್ಕೆ ವೈದ್ಯರು ವಿರೋಧ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮತ್ತು ಆ) ಬೆಂಗಳೂರಿನ ಮುಖ್ಯ ಆಸ್ಪತ್ರೆಗಳಲ್ಲಿನ ಕಾರ್ಯನಿರ್ವಹಣೆಯನ್ನು ಉತ್ತಮಪಡಿಸುವ ಉದ್ದೇಶ ಪರಿಶೀಲನೆಯಲ್ಲಿದೆ. ಸದರಿ ಆಸ್ಪತ್ರೆಗಳ ಅಧೀಕ್ಷಕರ ಉಸ್ತುವಾರಿಯಡಿಯಲ್ಲಿ ಕೆಲವು ಕಾಲ ಆಡಳಿತಾತ್ಮಕ ವಿಷಯಗಳನ್ನು ನೋಡಿಕೊಳ್ಳಲು ಕೆ.ಎ.ಎಸ್. ಅಧಿಕಾರಿಗಳನ್ನು ನೇಮಿಸುವುದು ಒಂದು ಸಲಹೆಯಾಗಿದೆ. ಮುಂದೆ ಆಸ್ಪತ್ರೆಯ ಆಡಳಿತಾತ್ಮಕ ವಿಷಯಗಳಲ್ಲಿ ವೈದ್ಯರು ತರಬೇತಿ ಹೊಂದಿ ಸದರಿ ಹೊಸ ಕ್ಷೇತ್ರದಲ್ಲಿ ಪರಿಣತಿ ಹೊಂದಬಹುದಾಗಿದೆ. ಈ ವಿಷಯವು ಇನ್ನೂ ಪ್ರಾರಂಭಿಕ ಹಂತದ ಪರಿಶೀಲನೆಯಲ್ಲಿದೆ.

ಇ) ಈ ಪ್ರಸ್ತಾವನೆಗೆ ಸ್ವಲ್ಪ ವಿರೋಧವಿರುವುದು ಗಮನಕ್ಕೆ ಬಂದಿದೆ. ಆದಾಗ್ಯೂ, ಆಸ್ಪತ್ರೆಗಳ ಆಡಳಿತ ಹಾಗೂ ವ್ಯವಸ್ಥೆಯನ್ನು ಉತ್ತಮಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ.

ರಾಜ್ಯದ ಸರ್ಕಾರಿ ಕಾಲೇಜುಗಳಿಗೆ ಯು.ಜಿ.ಸಿ. ಅನುದಾನ

4637 - ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ವಿಶ್ವವಿದ್ಯಾಲಯ ಅನುದಾನ ಆಯೋಗ ಧನ ಸಹಾಯ ನೀಡಿದೆಯೇ?

ಇ) ಹಾಗಿದ್ದಲ್ಲಿ ಯಾವ ಯಾವ ಕಾಲೇಜುಗಳಿಗೆ ಯು.ಜಿ.ಸಿ. ಧನ ಸಹಾಯವನ್ನು ನೀಡಿದೆ?

ಈ) ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಕಾಲೇಜುಗಳಿಗೆ ಯು.ಜಿ.ಸಿ. ಧನ ಸಹಾಯ ನೀಡಲು ಉತ್ಸುಕವಾಗಿರುವುದು ನಿಜವಲ್ಲವೇ?

ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಡಾ. ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) 151 (ಜಿಲ್ಲಾವಾರು ವಿವರಗಳನ್ನು ಅನುಬಂಧ -1ರಲ್ಲಿ ನೀಡಲಾಗಿದೆ)

ಆ) 151 ಕಾಲೇಜುಗಳ ಪೈಕಿ 37 ಕಾಲೇಜುಗಳಿಗೆ ಕಟ್ಟಡ, ಉಪಕರಣ ಹಾಗೂ ಗ್ರಂಥಾಲಯಕ್ಕೆ ಯುಜಿಸಿ ಯು ಧನ ಸಹಾಯ ನೀಡುತ್ತಿದೆ.

ಇ) ಅನುಬಂಧ-2ರಲ್ಲಿ ನೀಡಲಾಗಿದೆ.

ಈ) ನಿಜ.

ಉ) ಇನ್ನುಳಿದ ಕಾಲೇಜುಗಳಿಗೂ ಸಹ ಯುಜಿಸಿ ಧನ ಸಹಾಯ ಪಡೆಯಲು ಅರ್ಜಿ ಸಲ್ಲಿಸುವಂತೆ ಸೂಚಿಸಲಾಗುವುದು.

ಅನುಬಂಧ - 1

ರಾಜ್ಯದಲ್ಲಿರುವ ಸರ್ಕಾರಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜುಗಳ ಜಿಲ್ಲಾವಾರು ವಿವರಗಳು

1.	ಬೆಂಗಳೂರು ನಗರ ಜಿಲ್ಲೆ	10
2.	ಬೆಂಗಳೂರು ಗ್ರಾಮಾಂತರ	08
3.	ತುಮಕೂರು ಜಿಲ್ಲೆ	10
4.	ಕೋಲಾರ ಜಿಲ್ಲೆ	12
5.	ಮೈಸೂರು ಜಿಲ್ಲೆ	08
6.	ಚಾಮರಾಜ ನಗರ ಜಿಲ್ಲೆ	03
7.	ಮಂಡ್ಯ ಜಿಲ್ಲೆ	06
8.	ಹಾಸನ ಜಿಲ್ಲೆ	10
9.	ಶಿವಮೊಗ್ಗ ಜಿಲ್ಲೆ	10
10.	ಚಿತ್ರದುರ್ಗ ಜಿಲ್ಲೆ	07
11.	ದಾವಣಗೆರೆ	03
12.	ಚಿಕ್ಕಮಗಳೂರು ಜಿಲ್ಲೆ	07
13.	ದಕ್ಷಿಣ ಕನ್ನಡ ಜಿಲ್ಲೆ	07

14. ಉಡುಪಿ ಜಿಲ್ಲೆ	07
15. ಕೊಡಗು ಜಿಲ್ಲೆ	01
16. ಧಾರವಾಡ ಜಿಲ್ಲೆ	02
17. ಗದಗ್ ಜಿಲ್ಲೆ	04
18. ಹಾವೇರಿ ಜಿಲ್ಲೆ	04
19. ಉತ್ತರ ಕನ್ನಡ ಜಿಲ್ಲೆ	04
20. ಬೆಳಗಾಂ ಜಿಲ್ಲೆ	03
21. ಬಾಗಲಕೋಟೆ ಜಿಲ್ಲೆ	02
22. ಬಿಜಾಪುರ ಜಿಲ್ಲೆ	00
23. ಗುಲ್ಬರ್ಗಾ ಜಿಲ್ಲೆ	10
24. ರಾಯಚೂರು ಜಿಲ್ಲೆ	04
25. ಕೊಪ್ಪಳ ಜಿಲ್ಲೆ	04
26. ಬಳ್ಳಾರಿ ಜಿಲ್ಲೆ	05
27. ಬೀದರ್ ಜಿಲ್ಲೆ	01

ANNEXURE

GOVERNMENT COLLEGES :

A. COLLEGES TEACHING UPTO BACHELOR'S DEGREE

1.	Government Science College, Bangalore-1	1971
2.	Government Science College, Tumkur	1973
3.	Government First Grade College, Chintamani, Kolar District (Having Continuous affiliation upto 89-90)	1965
4.	Government College for Women Kolar (Not declared fit to receive asst. from UGC & other Central Sources under section 12(B) the UGC Act)	1984
5.	Government College, Chikballapur (Affiliation upto 89-90)	1968

6.	Government Arts College, Bangalore (Affiliation upto 89-90)	1971
7.	Maharani's Science College for Women Bangalore	1975
8.	Maharanis's Arts College for Women, Bangalore	1975
9.	Ramanarayan Chellaram College of Commerce Bangalore.	1948
10.	Government College, Gulbarga (on temporary affiliation upto 97-98)	1932
11.	Government College for Boys Mandya.	1971
12.	Government Arts College, Sindhnoor (On temporary affiliation upto 97-98)	1971
13.	Government First Grade College, Bidar (fit to receive assistance from UGC & other central sources under sec. 12(B)	1974
14.	BM Shetty Government First Grade College Konnanur, Hassan District (on temporary affiliation)	1954
15.	Government Arts College Hassan (On temporary Affiliation Upto 89-90)	1984
16.	Government Science College Hassan	1984
17.	Government College for Boys, Mandya	1971-72
18.	Government First Grade College, Krishnarajanagar (On temporary affiliation)	1971
19.	Government First Grade College, Hunsur (On temporary affiliation)	1971

20.	Maharani Arts College for Women, Mysore	1979
21.	Maharani's Science College for Women, Mysore	1979
22.	Shri Mahadeswara College for Arts and Science Kollegal (On temporary affiliation)	1966
23.	Government First Grade College Koppa, Chikamaglur Dist. (On temporary affiliation upto 91-92)	1982
24.	Sir. M.V. Science College, Bommankatta, Bhadravathi (Not declared fit to receive assistance from UGC and other Central Source under Section 12(B) of the UGC Act 1956)	1976-77
25.	Sir. MV Arts and Commerce College, Bhadravathi (Not declared fit to receive assistance from UGC and other Central Sources under Section 12(B) of the UGC Act 1956)	
26.	Government Science College, Chitradurga	1973
27.	HPPC Government First Grade College, Challakere (On temporary affiliation)	1969
28.	IDSG Government College, Chikmaglur	1948
29.	Basanagowda Giraddi Government First Grade College, Ron	1991-92
30.	Government Arts and Science College Karwar (On temporary affiliation upto 1990)	1961
31.	Government First Grade College, Haliyal (On temporary affiliation upto June 1990) (Not declared fit to receive central assistance under sec 12(B) of the UGC Act 1956	

32. Government First Grade College
Gajendragad, (On temporary affiliation upto 90-91)

33. Government First Grade College, Hirekerur
(On temporary affiliation upto 90-91)

34. Government First Grade College, Mundagad
(Having continuous affiliation upto 89-90)

35. Government First Grade College, Savanur, Dharwad
(Not declared fit to receive central assistance under section 12(B)

36. Government Arts College,
Chitradurga

37. Smt. VHD Central Institute of Home Science, 1961
Bangalore

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಟಿ.ಸಿ.ಹೆಚ್. ಕಾಲೇಜು ಮತ್ತು ಬಿ.ಇಡಿ ಕಾಲೇಜುಗಳು ಇಲ್ಲದಿರುವುದು

4638 - ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಟಿ.ಸಿ.ಹೆಚ್. ಕಾಲೇಜು ಮತ್ತು ಬಿ.ಇಡಿ. ಕಾಲೇಜುಗಳನ್ನು ಪ್ರಾರಂಭಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನಿವಾರಿಸಲು ಸರ್ಕಾರ ಟಿ.ಸಿ.ಹೆಚ್. ಹಾಗೂ ಬಿ.ಇಡಿ. ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು

ಆ) ರಾಜ್ಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕ ತರಬೇತಿ ಪಡೆದ ಅಭ್ಯರ್ಥಿಗಳು ಉದ್ಯೋಗಕ್ಕಾಗಿ ನೋಂದಾಯಿಸಿಕೊಂಡ ಹಿನ್ನೆಲೆಯಲ್ಲಿ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 7 ಯುಬಿಸಿ 2000, ದಿನಾಂಕ 07.03.2000ರಲ್ಲಿ ಹೊಸದಾಗಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಹಾಲಿ ಇರುವ ನಿಷೇಧವನ್ನು ದಿನಾಂಕ 31.03.2001 ರವರೆಗೆ ವಿಸ್ತರಿಸಲಾಗಿದೆ.